
# ನಾಲ್ಕು ಕವಿತೆಗಳು

**ಎಚ್.ಎಸ್. ಮುಕ್ತಾಯಕ್ಕ**

ಕಲೆ: ಜಬೀವುಲ್ಲಾ ಎಂ. ಅಸದ್



1

ಏಸೋ ಸಲ ನಾನು
ಉದಾಸಳಾದಾಗಲೆಲ್ಲ, ನಿನ್ನ
ಮೇಲೆ ಮುನಿದಾಗಲೆಲ್ಲ,
ನೀನು,
ನನ್ನ ಹೃದಯವ ಅರಳಿಸ
ಬಯಸುವೆ.
ನನ್ನ ತುಟಿಯಲಿ ಕಿರುನಗೆ
ಯ ನೋಡಬಯಸುವೆ,
ಅಂತೆ,
ನಗುತ ನನ್ನ ಕಣ್ಣ ಮುಚ್ಚುತ
ಕೇಳುವಿ;
“ನಾನಾರೆಂದು ಹೇಳಿದರೆ
ನಾನು ನಿನ್ನವನು,
ಹೇಳದಿದ್ದರೆ, ನೀನು
ನನ್ನವಳು!”